## 225 ಶಾಸಕರಿಗೆ ಡಾ.ಸುಧಾಕರ್ ನೈತಿಕ ಪರೀಕ್ಷೆ ಸವಾಲು, ವಿಷಾದ

# ಸಿಂಗಲ್ ಹೆಂಡ್ತಿ ಫಜೀತಿ!

25-3-2021

▫ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ರಾಜ್ಯದ 225 ಶಾಸಕರು 'ನೈತಿಕ ಪರೀಕ್ಷೆಗೆ ಒಳಪಡಲಿ' ಎಂದು ಬುಧವಾರ ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಅವರ ಹೇಳಿಕೆ ಹೊತ್ತಿಸಿದ ಕಿಡಿ ರಾಜ್ಯ ರಾಜಕೀಯದಲ್ಲೇ ವಿವಾದದ ಜ್ವಾಲೆಯಾಗಿ ಪ್ರಜ್ವಲಿಸಿ ಸರ್ಕಾರಕ್ಕೆ ಕೆಲಕಾಲ ಉಸಿರುಗಟ್ಟಿಸಿದ ಸಂದರ್ಭ ಸೃಷ್ಟಿಸಿತು.



» ಕೋರ್ಟ್‌ನತ್ತ ಪ್ರತಿಪಕ್ಷ ಚಿತ್ತ

ಸುಧಾಕರ್ ಅವರ ಓಪನ್ ಚಾಲೆಂಜ್ ವಿರುದ್ಧ ಪ್ರತಿಪಕ್ಷ ಕಾಂಗ್ರೆಸ್ ಮತ್ತು ಜೆಡಿಎಸ್ ಶಾಸಕರು ವಿಧಾನಸಭೆಯಲ್ಲಿ ಪ್ರತಿಭಟಿಸಿ, ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಬೇಕೆಂದು ಪಟ್ಟು ಹಿಡಿದರೆ, ಆಡಳಿತ ಪಕ್ಷದಿಂದಲೂ ಟೀಕೆ ವ್ಯಕ್ತವಾಯಿತು. ಸಿಎಂ ಬಿ.ಎಸ್. ಯಡಿಯೂರಪ್ಪ ಅವರೇ ಖುದ್ದು ಸಚಿವರನ್ನು ತಮ್ಮ ಕೊಠಡಿಗೆ ಕರೆಸಿಕೊಂಡು ಕ್ಷಮೆ ಕೋರುವಂತೆ ಸೂಚಿಸಿದ ಪ್ರಸಂಗವೂ ನಡೆಯಿತು. ಈ ನಡುವೆ ವಿಷಾದ ವ್ಯಕ್ತಪಡಿಸುವ ಮೂಲಕ ವಿಷಯಾಂತರಕ್ಕೆ ಸುಧಾಕರ್ ಪ್ರಯತ್ನಿಸಿದ್ದಾರೆ. ಆದರೆ ಈ ವಿಷಯವನ್ನು ಇಷ್ಟಕ್ಕೇ ಮುಗಿಸಲು ಇಷ್ಟಪಡದ ಕಾಂಗ್ರೆಸ್, ಸುಧಾಕರ್ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ವಿಧಾನಸಭೆ ಸಭಾಧ್ಯಕ್ಷರು, ಸಿಎಂಗೆ ಪತ್ರ ಬರೆದಿದೆ. ಹಕ್ಕುಚ್ಯುತಿ ಮಂಡಿಸುವ ಜತೆಗೆ ಕೋರ್ಟ್ ಮೊರೆ ಹೋಗಲು ಚಿಂತನೆ ನಡೆಸಿದೆ. ಹಾಗೆಯೇ ಮುಂಬರುವ ಉಪ ಚುನಾವಣೆಗಳಲ್ಲಿ ಈ ವಿಷಯ ಬಳಸಿಕೊಳ್ಳಲು ತೀರ್ಮಾನಿಸಿದೆ. ಸಿಡಿ ಗದ್ದಲದ ಬಗ್ಗೆ ಬುಧವಾರ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ್ದ ಸುಧಾಕರ್, ಕಾಂಗ್ರೆಸ್ ಟೀಕಿಸುವ ಭರದಲ್ಲಿ ಈ ಹೇಳಿಕೆ ನೀಡಿದ್ದರು.

» ಪುಟ 6B



ಸಚಿವ ಸುಧಾಕರ್ ಹೇಳಿಕೆ ವಿರುದ್ಧ ಬುಧವಾರ ವಿಧಾನ ಸಭೆಯಲ್ಲಿ ಕಾಂಗ್ರೆಸ್ ಶಾಸಕರ ಧರಣಿ.

## ಸುಧಾಕರ್ ಹೇಳಿದ್ದೇನು?

1 ಕಾಂಗ್ರೆಸ್, ಜೆಡಿಎಸ್‌ನವರು ಮರ್ಯಾದಾ ಪುರುಷೋತ್ತಮರು. ಶ್ರೀರಾಮಚಂದ್ರ ಅಂದುಕೊಂಡು ಮಾತಾಡುತ್ತಿದ್ದಾರೆ. ಅವರಿಗೆ ಸವಾಲು ಹಾಕುವೆ. 225 ಶಾಸಕರೂ ತನಿಖೆಗೊಳಪಡಲಿ. ಅನೈತಿಕ ಸಂಬಂಧ ಇಟ್ಟುಕೊಂಡಿಲ್ಲ ಎಂಬುದು ತನಿಖೆಯಿಂದ ಪ್ರೂವ್ ಆಗಲಿ.

2 ನನ್ನನ್ನೂ ಸೇರಿ ತನಿಖೆಯಾಗಲಿ, ಆಗ ಗೊತ್ತಾಗುತ್ತದೆ ಯಾರ ಚರಿತ್ರೆ ಏನು ಎಂದು. ಸಿಎಂ ಆಗಿದ್ದಾಗ ಯಾರು ಏನು ಮಾಡಿದ್ದರು ಅನ್ನೋದು ಗೊತ್ತಾಗಲಿ. ನೈತಿಕತೆ, ಮೌಲ್ಯಗಳ ಪ್ರಶ್ನೆ ತಾನೆ ಇದೆ? ನಾನು ಓಪನ್ ಚಾಲೆಂಜ್ ಮಾಡುತ್ತೇನೆ.

3 ಮಾನ್ಯ ಸಿದ್ದರಾಮಯ್ಯ, ಕುಮಾರಸ್ವಾಮಿ, ಮುನಿಯಪ್ಪ, ರಮೇಶ್ ಕುಮಾರ್, ಡಿ.ಕೆ. ಶಿವಕುಮಾರ್ ಸತ್ಯಹರಿಶ್ಚಂದ್ರರಲ್ಲವೇ? ಏಕಪತ್ನಿವ್ರತಸ್ಥರು ಅಲ್ಲವೇ? ಇವರೆಲ್ಲ ಮಾದರಿ ಆಗಿದ್ದಾರೆ ತಾನೆ? ತನಿಖೆಗೆ ಒಪ್ಪಿಕೊಳ್ಳಲಿ. ತನಿಖೆ ನಡೆದರೆ ಬಂಡವಾಳ ಗೊತ್ತಾಗಲಿದೆ.

26

# ಸಿಂಗಲ್ ಹೆಂಡ್ತಿ ಫಜೀತಿ!

ಮೊದಲನೇ ಪುಟದಿಂದ... ವಿ.ವಾ 25-3-21

**ಪ್ರತಿಪಕ್ಷ ಗರಂ:** ವಿಧಾನಮಂಡಲ ಅಧಿವೇಶನ ನಡೆಯುವಾಗಲೇ ಸಚಿವರ ಈ ಹೇಳಿಕೆ ಹೊರಬಂದಿದ್ದರಿಂದ ಪ್ರತಿಪಕ್ಷ ಕಾಂಗ್ರೆಸ್‌ಗೆ ದೊಡ್ಡ ವಿಷಯವಾಗಿ ಕಾಣಿಸಿತು. ಜೆಡಿಎಸ್ ಕೂಡ ಜತೆಗೂಡಿತು. ಬುಧವಾರ ಅಪರಾಹ್ನ ವಿಧಾನಸಭೆ ಕಲಾಪ ಸೇರಿದಾಗ ಧರಣಿಯಲ್ಲಿದ್ದ ಕಾಂಗ್ರೆಸ್, ಜೆಡಿಎಸ್ ಶಾಸಕರು ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು, ಸುಧಾಕರ್ ರಾಜೀನಾಮೆ ಕೊಡಲೇಬೇಕೆಂದು ಪಟ್ಟುಹಿಡಿದರು. ಸುಧಾಕರ್ 225 ಶಾಸಕರ ಬಗ್ಗೆ ತನಿಖೆ ನಡೆಯಲಿ ಎಂದು ಹೇಳಿಕೆ ನೀಡುವ ಮೂಲಕ ಸ್ಪೀಕರ್, ಸಿಎಂ ಮೇಲೂ ಸಂಶಯ ವ್ಯಕ್ತ ಮಾಡಿದ್ದಾರೆ, ಇದು ಸದನದ ಗೌರವಕ್ಕೆ ಚ್ಯುತಿ ಮಾಡಿದಂತೆ ಎಂದು ಹರಿಹಾಯ್ದರು. 'ನಾವೇನು ವ್ಯಭಿಚಾರ ಮಾಡುತ್ತಿದ್ದೇವೆಯೇ' ಎಂದು ವಿಧಾನಸಭೆ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಗಟ್ಟಿ ದನಿಯಲ್ಲಿ ಗದರಿದರು. ಸುಧಾಕರ್ ಪರವಾಗಿ ಸದನದಲ್ಲಿ ಗೃಹ ಸಚಿವ ಬಸವರಾಜ ಬೊಮ್ಮಾಯಿ ಸಮರ್ಥನೆಗೆ ಮುಂದಾದರು. ಸಿಎಂ ಉತ್ತರ ಕೊಡುವ ಗೋಜಿಗೆ ಹೋಗದೇ ಸುಮ್ಮನಿದ್ದರು. ಅಧಿವೇಶನ ಅನಿರ್ದಿಷ್ಟ ಅವಧಿಗೆ ಮುಂದೂಡಲ್ಪಡುತ್ತಿದ್ದಂತೆ ಸುಧಾಕರ್ ಅವರನ್ನು ತಮ್ಮ ಕೊಠಡಿಗೆ ಕರೆಸಿಕೊಂಡ ಸಿಎಂ, ಇಂತಹ ಹೇಳಿಕೆ ನೀಡಿ ಏಕೆ ಗೊಂದಲ ಸೃಷ್ಟಿ ಮಾಡುತ್ತಿದ್ದೀರಿ? ಕೂಡಲೇ ಕ್ಷಮೆ ಕೋರಿ ವಿಷಯ ಇಲ್ಲಿಗೆ ಮುಗಿಸಿ ಎಂದು ತಾಕೀತು ಮಾಡಿದರು.

ಬಳಿಕವಷ್ಟೇ ಸುಧಾಕರ್ ವಿಷಾದ ವ್ಯಕ್ತಪಡಿಸಿ 'ಯಾರಿಗಾದರೂ ನನ್ನ ಹೇಳಿಕೆಯಿಂದ ನೋವಾಗಿದ್ದಲ್ಲಿ ವಿಷಾದಿಸುತ್ತೇನೆ. ನಮ್ಮ 17 ಜನರ ವಿರುದ್ಧ ತೇಜೋವಧೆ ಯತ್ನ ನಡೆಸಿದ್ದ ಕೆಲ ನಾಯಕರ ವಿರುದ್ಧ ಮಾತ್ರ ನಾನು ಹೇಳಿಕೆ ನೀಡುವ ಯತ್ನ ಮಾಡಿದ್ದೇನೆ' ಎಂದು ಪ್ರತಿಕ್ರಿಯಿಸಿದರು. ಈ ಮುನ್ನ 'ಇಡೀ ರಾಜ್ಯದ ಜನರನ್ನು ತಪ್ಪು ದಾರಿಗೆ ಎಳೆದು ರಾಜಕೀಯ ದ್ವೇಷ ಸಾಧಿಸಲು ಹೊರಟಿರುವ ಮಹಾನಾಯಕರ ಮುಖವಾಡ ಕಳಚುವ ಉದ್ದೇಶ ನನ್ನ ಹೇಳಿಕೆಯ ಹಿಂದೆ ಇತ್ತು ಅಷ್ಟೇ' ಎಂದು ಟ್ವೀಟರ್‌ನಲ್ಲಿ ಬರೆದಿದ್ದರು.



**ಸಚಿವ ಸುಧಾಕರ್ ಉದ್ಧಟತನದ ಹೇಳಿಕೆ ನೀಡಿದ್ದಾರೆ. ತಮ್ಮ ಪಾಪಪ್ರಜ್ಞೆಯಿಂದ ಈ ರೀತಿ ಮಾತನಾಡಿರುವುದು ಸ್ಪಷ್ಟವಾಗುತ್ತಿದೆ. ಇವರ ಹೇಳಿಕೆಯಿಂದ ಜನರು ಜನಪ್ರತಿನಿಧಿಗಳನ್ನು ನೋಡುವ ರೀತಿಯೇ ಬದಲಾಗುತ್ತದೆ. ಎಲ್ಲ ಶಾಸಕರು ತಲೆ ತಗ್ಗಿಸುವಂತಾಗಿದೆ.**

**। ಸಿದ್ದರಾಮಯ್ಯ**
ವಿಧಾನಸಭೆ ಪ್ರತಿಪಕ್ಷ ನಾಯಕ

**ಏಕಪತ್ನಿ ವ್ರತಸ್ಥರ ಟ್ರೆಂಡ್:** ಸುಧಾಕರ್ ಹೇಳಿಕೆ ರಾಜಕೀಯ ನಾಯಕರನ್ನು ತಲ್ಲಣಗೊಳಿಸಿತು. ಹಲವು ಶಾಸಕರು ತಾವು ಏಕಪತ್ನಿ ವ್ರತಸ್ಥ ಎಂದು ಮಾಧ್ಯಮದ ಮುಂದೆ ಘೋಷಿಸಿಕೊಂಡರು, ದೇವರಾಣೆಯನ್ನೂ ಹಾಕಿದರು. ಕೆಲವರು ಇಂಥ ಹೇಳಿಕೆ ಸರಿಯಲ್ಲ ಎಂದು ಆಕ್ಷೇಪಿಸಿದರು. ಈ ಪರಿಸ್ಥಿತಿಯಲ್ಲಿ ಮನೆಗೆ ಹೋದರೆ ಬೂಟ್‌ನಲ್ಲಿ ಹೊಡೆಯುತ್ತಾರೆ ಎಂದು ವಿಧಾನಸಭೆಯಲ್ಲಿ ಶಾಸಕರೊಬ್ಬರು ಬೊಬ್ಬೆಹಾಕಿದ ಪ್ರಸಂಗ ನಡೆಯಿತು. ನನಗಿರುವುದು ಒಬ್ಬಳೇ ಹೆಂಡತಿ, ಒಂದೇ ಸಂಸಾರ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ದನಿಗೂಡಿಸಿದರೆ, ಸಚಿವರ ಹೇಳಿಕೆಯಿಂದ ತಮಗೆ ಮುಜುಗರವಾಗಿದೆ ಎಂದು ಮಹಿಳಾ ಶಾಸಕರು ಮಾಧ್ಯಮದ ಮುಂದೆ ಹೇಳಿಕೊಂಡರು. ಸಾಮಾಜಿಕ ಜಾಲತಾಣದಲ್ಲಿಯೂ ಈ ವಿಷಯ ದೊಡ್ಡ ಮಟ್ಟದಲ್ಲಿ ಚರ್ಚೆಗೆ ಸರಕಾಗಿ ಪರಿಣಮಿಸಿತು.